ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ಆದೇಶ ಸಂಖ್ಯೆ: ಕವಿಪ್ರನಿನಿ/ಬಿ84/24333/2021-22. ದಿನಾಂಕ : 22 JUN 2021

ವಿಷಯ: ಈ ಹಿಂದೆ ಇದ್ದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ(ಕವಿಮಂ) ನಿಯಮಗಳು/ ಕೈಪಿಡಿಗಳನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ(ಕವಿಪ್ರನಿನಿ) ನಿಯಮಗಳು/ಕೈಪಿಡಿಗಳು ಎಂದು ಮರು ಹೆಸರಿಸುವುದರ ಬಗ್ಗೆ.

ಉಲ್ಲೇಖ: ದಿನಾಂಕ:09.04.2021 ರಂದು ನಡೆದ ಕವಿಪ್ರನಿನಿಯ 124 ನೇ ಮಂಡಳಿಯ ನಿರ್ದೇಶಕರ ಸಭೆಯ ನಡಾವಳಿಗಳು ವಿಷಯ ಸಂಖ್ಯೆ 124 / ಎ 13 ರಂತೆ.

*****

**ಪೀಠಿಕೆ:**

ಕರ್ನಾಟಕದ ವಿದ್ಯುತ್ ಕ್ಷೇತ್ರದ ಪುನರ್ ರಚಿಸುವಿಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸಾಂಸ್ಥಿಕೀಕರಣ, ಉತ್ಪಾದನೆ, ಪ್ರಸರಣ, ವಿತರಣೆ ಮತ್ತು ಸರಬರಾಜುಗಳಿಗೆ, ಕರ್ನಾಟಕ ಸರ್ಕಾರವು ಹಾಗೂ ಕರ್ನಾಟಕ ವಿದ್ಯುತ್ ಸುಗ್ರಿವಾಜ್ಞೆ, ಸುಧಾರಣೆ 1999 ರನ್ನು ಘೋಷಿಸಲಾಗಿದೆ.

ಮೇಲೆ ತಿಳಿಸಿರುವ ಸುಗ್ರಿವಾಜ್ಞೆಯನ್ವಯ, ಈ ಹಿಂದೆ ಇದ್ದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯನ್ನು(ಕವಿಮಂ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ(ಕವಿಪ್ರನಿನಿ) ಎಂದು ಮರುಹೆಸರಿಸಿ ಕಂಪನಿ ಕಾಯ್ದೆ 1956ರ ಅಡಿಯಲ್ಲಿ ದಿನಾಂಕ 28.07.1999 ರಂದು ಕಂಪನಿಯು ನೊಂದಾಯಿಸಿ, ಸಾಂಸ್ಥಿಕೀಕರಣಗೊಳಿಸಿ ದಿನಾಂಕ 01.08.1999 ರಿಂದ ಜಾರಿಗೆ ಬರುವಂತೆ ಪ್ರಸರಣ ಕಂಪನಿಯ ಕಾರ್ಯಚರಣೆ ಪ್ರಾರಂಭಿಸಲಾಗಿದೆ.

ಮುಂದುವರೆದು, ಕವಿಪ್ರನಿನಿಯನ್ನು ವಿಭಜಿಸಿ ಹೊಸದಾಗಿ ನಾಲ್ಕು ಸ್ವತಂತ್ರ ವಿತರಣಾ ಕಂಪನಿಗಳಾದ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ(ಬೆಸ್ಕಾಂ), ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ(ಮೆಸ್ಕಾಂ), ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹೆಸ್ಕಾಂ), ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಜೆಸ್ಕಾಂ) ಗಳು ದಿನಾಂಕ:01.06.2002 ರಿಂದ ಕಾರ್ಯಚಟುವಟಿಕೆಯನ್ನು ಪ್ರಾರಂಭಿಸಿತು. ನಂತರ ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ(ಮೆಸ್ಕಾಂ)ವನ್ನು ವಿಭಜನೆಗೊಳಿಸಿ ಮತ್ತೊಂದು ವಿತರಣಾ ಕಂಪನಿಯನ್ನು ದಿನಾಂಕ:01.04.2005 ರಿಂದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ಕಾರ್ಯಚರಣೆ ಪ್ರಾರಂಭಿಸಲಾಗಿದೆ.

ಈ ಹಿಂದೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ(ಕವಿಮಂ) ತನ್ನ ಚಟುವಟಿಕೆಗಳನ್ನು ಸುಗಮವಾಗಿ ನಿರ್ವಹಿಸಲು ರೂಪಿಸಿದ್ದ 1987 ರಿಂದ 1999 ರವರೆಗೆ ಹೊರಡಿಸಿದ್ದ ನಿಯಮಗಳನ್ನು ಹಾಗೂ ವಿವಿಧ ಕೈಪಿಡಿಗಳನ್ನು ಸೂಕ್ತ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಪ್ರಕಟಿಸಲಾಗಿದೆ.

ವಿದ್ಯುತ್ ಕ್ಷೇತ್ರದಲ್ಲಿನ ಸುಧಾರಣೆಗಳಿಗೆ ಅನುಗುಣವಾಗಿ, ಹಲವು ವರ್ಷಗಳಲ್ಲಿ ಹೊರಡಿಸಲಾದ ವಿವಿಧ ತಿದ್ದುಪಡಿಗಳನ್ನು ಅಳವಡಿಸಿ ನಿಯಮಾವಳಿಗಳನ್ನು ರೂಪಿಸಲಾಗಿದೆ.

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ 12 ಸೇನಿಸಿ 2019, ಬೆಂಗಳೂರು ದಿನಾಂಕ: 07.01.2021 ರಲ್ಲಿ ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮಗಳು, 2021 ರನ್ನು ಪ್ರಕಟಿಸಲಾಗಿದೆ.

ಕವಿಪ್ರನಿನಿ ಮಂಡಳ ನಿರ್ದೇಶಕರ 124 ನೇ ಸಭೆಯು ದಿನಾಂಕ: 09.04.2021 ರಲ್ಲಿ ನಡೆದು ಕವಿಮಂ ನಿಯಮಾವಳ ಮತ್ತು ಕೈಪಿಡಿಗಳನ್ನು ಕವಿಪ್ರನಿನಿ ನಿಯಮಾವಳ ಮತ್ತು ಕೈಪಿಡಿಗಳು ಎಂದು ಮರುಹೆಸರಿಸಲು ಅನುಮೋದಿಸಲಾಗಿದೆ. ಮುಂದುವರೆದು, ಕವಿಪ್ರನಿನಿಯಲ್ಲಿ ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮಗಳು, 2021 ನ್ನು ಸೂಕ್ತ ಬದಲಾವಣೆಗಳೊಂದಿಗೆ, ಈ ಆದೇಶದ ಅನುಬಂಧದಲ್ಲಿ ತಿಳಿಸಿರುವಂತೆ, ಕವಿಪ್ರನಿನಿ ನೌಕರರ ಸೇವಾ(ನಡೆತೆ) ನಿಯಮಗಳು 2021 ರಂತೆ ಅಳವಡಿಸಲು ತೀರ್ಮಾನಿಸಲಾಗಿದೆ.

ಆದ್ದರಿಂದ ಈ ಕೆಳಕಂಡಂತೆ ಆದೇಶ:

22 JUN 2021

**ಆದೇಶ ಸಂಖ್ಯೆ:ಕವಿಪ್ರನಿನಿ/ಬಿ84/24333/2021-22, ಬೆಂಗಳೂರು, ದಿನಾಂಕ: 22.06.2021.**

ದಿನಾಂಕ: 09.04.2021 ರಂದು ನಡೆದ ಕವಿಪ್ರನಿನಿಯ 124 ನೇ ಮಂಡಳಯ ನಿರ್ದೇಶಕರ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯಗಳಗೆ ಅನುಸಾರವಾಗಿ, ನಿಯಮಗಳು / ಕೈಪಿಡಿಗಳಗೆ ಈ ಕೆಳಕಂಡಂತೆ ಮರುಹೆಸರಿಸಲು ಅನುಮೋದನೆ ನೀಡಲಾಗಿದೆ: -

| ಕ್ರ.ಸಂ | **ಅಸ್ತಿತ್ವದಲ್ಲಿರುವ ಕೈಪಿಡಿಗಳು/ನಿಯಮಾವಳಗಳು ಹಾಗೂ ನಿಬಂಧನೆಗಳು ತಿದ್ದುಪಡಿಯಾದ ದಿನಾಂಕ:09.04.2021 ರಂತೆ** | **ಮರು ಹೆಸರಿಸಿರುವಂತೆ,** |
|---|---|---|
| 1 | ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಯ ನೌಕರಿಭರ್ತಿ ಮತ್ತು ಬಡತಿ ನಿಯಮಗಳು, ನೌಕರರ(ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ (ಜ್ಯೇಷ್ಠತಾ) ನಿಯಮಗಳು | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ನೌಕರಿಭರ್ತಿ ಮತ್ತು ಬಡತಿ ನಿಯಮಗಳು, ನೌಕರರ(ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ (ಜ್ಯೇಷ್ಠತಾ) ನಿಯಮಗಳು |
| 2 | ಕರ್ನಾಟಕ ವಿದ್ಯುಚ್ಛಕ್ತಿ ಮಂಡಳ ನೌಕರರ ಸೇವಾ ನಿಯಮಗಳು (ಬಿಇಎಸ್ಆರ್) | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ನೌಕರರ ಸೇವಾ ನಿಯಮಗಳು(ಕೆಪಿಟಿಸಿಎಲ್ಇಎಸ್ಆರ್). |
| 3 | ಕರ್ನಾಟಕ ವಿದ್ಯುಚ್ಛಕ್ತಿ ಮಂಡಳ ಲೆಕ್ಕಗಳ ಕೈಪಿಡಿ ಸಂಪುಟ -1 | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಲೆಕ್ಕಗಳ ಕೈಪಿಡಿ ಸಂಪುಟ -1. |
| 4 | ಕರ್ನಾಟಕ ವಿದ್ಯುಚ್ಛಕ್ತಿ ಮಂಡಳ ಲೆಕ್ಕಗಳ ಕೈಪಿಡಿ ಸಂಪುಟ -2 (ಭಾಗ- ಎ) | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಲೆಕ್ಕಗಳ ಕೈಪಿಡಿ ಸಂಪುಟ-2 (ಭಾಗ-ಎ). |
| 5 | ಕರ್ನಾಟಕ ವಿದ್ಯುಚ್ಛಕ್ತಿ ಮಂಡಳ ಲೆಕ್ಕಗಳ ಕೈಪಿಡಿ ಸಂಪುಟ-2 (ಭಾಗ- ಬಿ) | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಲೆಕ್ಕಗಳ ಕೈಪಿಡಿ ಸಂಪುಟ -2 (ಭಾಗ-ಬಿ). |
| 6 | ಕರ್ನಾಟಕ ವಿದ್ಯುಚ್ಛಕ್ತಿ ಮಂಡಳ ಲೆಕ್ಕಪರಿಶೋಧಕ ಕೈಪಿಡಿ | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಲೆಕ್ಕಪರಿಶೋಧಕ ಕೈಪಿಡಿ. |
| 7 | ಕರ್ನಾಟಕ ವಿದ್ಯುಚ್ಛಕ್ತಿ ಮಂಡಳ ಅಧಿಕಾರ ಪ್ರತ್ಯಾಯೋಜನೆಯ ಕೈಪಿಡಿ | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಅಧಿಕಾರ ಪ್ರತ್ಯಾಯೋಜನೆಯ ಕೈಪಿಡಿ |
| 8 | ಕರ್ನಾಟಕ ವಿದ್ಯುಚ್ಛಕ್ತಿ ಮಂಡಳ ನೌಕರರ (ವರ್ಗೀಕರಣ, ಶಿಸ್ತು ನಿಯಂತ್ರಣ ಮತ್ತು ಮೇಲ್ಮನವಿ)ನಿಯಮಗಳು(ಸಿಡಿಸಿಮತ್ತುಎ). | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ನೌಕರರ (ವರ್ಗೀಕರಣ, ಶಿಸ್ತು ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು |
| 9 | ಕರ್ನಾಟಕ ವಿದ್ಯುಚ್ಛಕ್ತಿ ಮಂಡಳ ನೌಕರರ ವೈದ್ಯಕೀಯ ಹಾಜರಾತಿ ನಿಯಮಗಳು- 1987 | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ನೌಕರರ ವೈದ್ಯಕೀಯ ಹಾಜರಾತಿ ನಿಯಮಗಳು. |

ಮುಂದುವರೆದು, ಕರ್ನಾಟಕ ರಾಜ್ಯ ಸರ್ಕಾರದಿಂದ ಪ್ರಕಟಿಸಲಾದ ಕರ್ನಾಟಕ ರಾಜ್ಯ ನಾಗರಿಕ ಸೇವಾ(ನಡತೆ) ನಿಯಮಗಳು, 2021, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 121 ಸೇನಿನಿ 2019, ಬೆಂಗಳೂರು ದಿನಾಂಕ: 07.01.2021 ರನ್ನು ನಿಗಮದಲ್ಲಿ ಸೂಕ್ತ ಬದಲಾವಣೆಗಳೊಂದಿಗೆ, ಈ ಆದೇಶದ ಅನುಬಂಧದಲ್ಲಿ ತಿಳಿಸಿರುವಂತೆ, ಕವಿಪ್ರನಿನಿ ನೌಕರರ ಸೇವಾ(ನಡತೆ) ನಿಯಮಗಳು, 2021, ಎಂದು ಅಳವಡಿಸಿಕೊಳ್ಳಲಾಗಿದೆ. ಪ್ರಸ್ತುತ ಜಾರಿಯಲ್ಲಿರುವ ಕವಿಮಂ ನೌಕರರ ಸೇವಾ(ನಡತೆ) ನಿಯಮಾವಳಿಗಳನ್ನು ನಿರಸನಗೊಳಿಸಲಾಗಿ, ಈ ಹಿಂದೆ ಜಾರಿಗೊಳಿಸುವುದನ್ನು ಅಥವಾ ಅವುಗಳಡಿಯಲ್ಲಿ ಯಥೋಚಿತವಾಗಿ ಮಾಡಿದ ಅಥವಾ ಅದರಿಂದ ಅನುಭವಿಸಿದ ಯಾವುದೇ ವಿಷಯಕ್ಕೆ ಬಾಧೆ ಉಂಟುಮಾಡತಕ್ಕದ್ದಲ್ಲ. ಸದರಿ ನಿಯಮಗಳಡಿಯಲ್ಲಿ ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕು, ಹೊಣೆಗಾರಿಕೆ ಅಥವಾ ಬಾಧ್ಯತೆಗೆ ಬಾಧೆಯನ್ನುಂಟು ಮಾಡತಕ್ಕದ್ದಲ್ಲ.

"ಕವಿಪ್ರನಿನಿಯ 124 ನೇ ಮಂಡಳಿಯ ನಿರ್ದೇಶಕರ ಸಭೆಯ **ದಿನಾಂಕ:09.04.2021** ರಿಂದ ಅನ್ವಯವಾಗುವಂತೆ, ಈ ಮೇಲೆ ತಿಳಿಸಿರುವ ನಿಯಮಾವಳಿಗಳು ನಿಬಂಧನೆಗಳು ಹಾಗೂ ಕೈಪಿಡಿಗಳು ಜಾರಿಗೆ ಬಂದಿರುತ್ತದೆ".

ಅನುಮೋದಿಸಲ್ಪಟ್ಟ ನಿಯಮಾವಳಿಗಳು / ಕೈಪಿಡಿಗಳು ಮುಂದೆ ಪ್ರಕಟಿಸಲಾಗುವುದು.

**'ಆದೇಶದ ಮೇರೆಗೆ'**

**ನಿರ್ದೇಶಕರು(ಆಡಳಿತ ಮತ್ತು ಮಾ.ಸಂ),**
**ಕವಿಪ್ರನಿನಿ.**

**ಪ್ರತಿಯನ್ನು ಮಾಹಿತಿಗಾಗಿ:-**

1. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಬೆವಿಸಕಂ/ಗುವಿಸಕಂ/ ಮವಿಸಕಂ / ಹುವಿಸಕಂ /ಮೆಸ್ಕಾಂ/ಪಿ.ಸಿ.ಕೆ.ಎಲ್.

ಪ್ರತಿಗಳು:-

1. ನಿರ್ದೇಶಕರು(ಪ್ರಸರಣ), ಕವಿಪ್ರನಿನಿ ಹಾಗೂ ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ ಹಾಗೂ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು.
3. ಎಲ್ಲಾ ಮುಖ್ಯ ಇಂಜಿನಿಯರ್(ವಿದ್ಯುತ್), ಕವಿಪ್ರನಿನಿ ಹಾಗೂ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು.
4. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಹಣಕಾಸು)/ ನಿರ್ದೇಶಕರು(ಪ್ರಸರಣ)/ ನಿರ್ದೇಶಕರು(ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು:-

5. ಅಧೀಕ್ಷಕ ಇಂಜಿನಿಯರ್(ವಿದ್ಯುತ್), ಮಾಹಿತಿ ತಂತ್ರಜ್ಞಾನ, ಕವಿಪ್ರನಿನಿ.
2. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿದ್ಯುತ್), / ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು/ಪಿ.ಸಿ.ಕೆ.ಎಲ್.
6. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ ಹಾಗೂ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು.
3. ಎಲ್ಲಾ ಮುಖ್ಯ ಇಂಜಿನಿಯರ(ವಿದ್ಯುತ್),/ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು/ಪಿ.ಸಿ.ಕೆ.ಎಲ್.
7. ಕವಿಪ್ರನಿನಿಯ ನಿಗಮದ ಎಲ್ಲಾ ಅಧಿಕಾರಿಗಳಿಗೆ.

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು ಕವಿಪ್ರನಿನಿ ನೌಕರರ ಸಂಘ (ನೋಂದಣಿ ಸಂಖ್ಯೆ:659), ಬೆಂಗಳೂರು ಮತ್ತು ನಿರ್ದೇಶಕರು ಕವಿಪ್ರನಿನಿ ಹಾಗೂ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು.

2. ಶ್ರೀ.ಟಿ.ಶಿವಪ್ರಕಾಶ್, ಅಧ್ಯಕ್ಷರು ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು ಮತ್ತು ನಿರ್ದೇಶಕರು ಕವಿಪ್ರನಿನಿ ಹಾಗೂ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಪಿಂಚಣಿದಾರರ ಸಂಘ, ಕಾವೇರಿ ಭವನ ಬೆಂಗಳೂರು.

ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ಆದೇಶ ಸಂಖ್ಯೆ:- ಕವಿಪ್ರನಿನಿ/ಬಿ84/24333/2021-22.

ದಿನಾಂಕ : 29 JAN 2022

ವಿಷಯ: ಕರ್ನಾಟಕ ವಿದ್ಯುಚ್ಛಕ್ತಿ ಮಂಡಳ ಲೆಕ್ಕಗಳ ಕೈಪಿಡಿ ಸಂಪುಟ -3 (ಕಮರ್ಷಿಯಲ್ ಅಕೌಂಟಿಂಗ್)ನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಲೆಕ್ಕಗಳ ಕೈಪಿಡಿ ಸಂಪುಟ-3 (ಕಮರ್ಷಿಯಲ್ ಅಕೌಂಟಿಂಗ್) ಎಂದು ಮರುಹೆಸರಿಸಿರುವ ಕುರಿತು.

ಉಲ್ಲೇಖ:-
1. ದಿನಾಂಕ:09.04.2021 ರಂದು ನಡೆದ ಕವಿಪ್ರನಿನಿಯ 124 ನೇ ಮಂಡಳಿಯ ನಿರ್ದೇಶಕರ ಸಭೆಯಲ್ಲಿ ಹೊರಡಿಸಿದ ನಿರ್ಣಯಗಳು.
2. ಆದೇಶ ಸಂಖ್ಯೆ: ಕವಿಪ್ರನಿನಿ/ಬಿ84/24333/2021-22. ದಿನಾಂಕ: 22.06.2021.
3. ದಿನಾಂಕ:24.12.2021 ರಂದು ನಡೆದ ಕವಿಪ್ರನಿನಿಯ 127 ನೇ ಮಂಡಳಿಯ ನಿರ್ದೇಶಕರ ಸಭೆಯಲ್ಲಿ ಹೊರಡಿಸಿದ ನಿರ್ಣಯಗಳು.

*****

ಪೀಠಿಕೆ:-

ಈ ಹಿಂದೆ ಇದ್ದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳ(ಕವಿಮಂ) ನಿಯಮಗಳು/ಕೈಪಿಡಿಗಳನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ(ಕವಿಪ್ರನಿನಿ) ನಿಯಮಗಳು/ಕೈಪಿಡಿಗಳು ಎಂದು ಮರು ಹೆಸರಿಸಲು ದಿನಾಂಕ:09.04.2021 ರಂದು ನಡೆದ ಕವಿಪ್ರನಿನಿಯ 124ನೇ ಮಂಡಳಿಯ ನಿರ್ದೇಶಕರ ಸಭೆಯಲ್ಲಿ ಅನುಮೋದನೆ ನೀಡಲಾಗಿತ್ತು. ಅದರನ್ವಯ ಉಲ್ಲೇಖ -2 ರ ಆದೇಶವನ್ನು ಹೊರಡಿಸಲಾಗಿತ್ತು.

ತದನಂತರ, ದಿನಾಂಕ:24.12.2021 ರಂದು ನಡೆದ ಕವಿಪ್ರನಿನಿಯ 127 ನೇ ಮಂಡಳಿಯ ನಿರ್ದೇಶಕರ ಸಭೆಯಲ್ಲಿ ಈ ಹಿಂದೆ 124ನೇ ಸಭೆಯಲ್ಲಿ (ವಿಷಯ ಸಂಖ್ಯೆ: 124/A13) ಹೊರಡಿಸಲಾದ ನಿರ್ಣಯಗಳಿಗೆ ಈ ಕೆಳಕಂಡಂತೆ ಸೇರ್ಪಡೆಯನ್ನು ಅನುಮೋದಿಸಲಾಗಿರುತ್ತದೆ:

| ಕ್ರ.ಸಂ | ಅಸ್ತಿತ್ವದಲ್ಲಿರುವ ಕೈಪಿಡಿ | ಮರು ಹೆಸರಿಸಲಾಗಿದೆ, |
|---|---|---|
| 11. | ಕರ್ನಾಟಕ ವಿದ್ಯುಚ್ಛಕ್ತಿ ಮಂಡಳ ಲೆಕ್ಕಗಳ ಕೈಪಿಡಿ ಸಂಪುಟ -3 (ಕಮರ್ಷಿಯಲ್ ಅಕೌಂಟಿಂಗ್) | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಲೆಕ್ಕಗಳ ಕೈಪಿಡಿ ಸಂಪುಟ-3 (ಕಮರ್ಷಿಯಲ್ ಅಕೌಂಟಿಂಗ್). |

**ಆದ್ದರಿಂದ ಈ ಕೆಳಕಂಡಂತೆ ಸೇರ್ಪಡೆ ಆದೇಶ:**

**ಆದೇಶ ಸಂಖ್ಯೆ:- ಕವಿಪ್ರನಿನಿ/ಬಿ84/24333/2021-22. ಬೆಂಗಳೂರು, ದಿನಾಂಕ:** 29 JAN 2022

ದಿನಾಂಕ:24.12.2021 ರಂದು ನಡೆದ ಕವಿಪ್ರನಿನಿಯ 127 ನೇ ಮಂಡಳಿಯ ನಿರ್ದೇಶಕರ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯಗಳಿಗೆ ಅನುಸಾರವಾಗಿ ಈ ಕೆಳಕಂಡಂತೆ ಮರುಹೆಸರಿಸಲು ಅನುಮೋದನೆ ನೀಡಲಾಗಿದೆ:

| ಕ್ರ.ಸಂ | ಅಸ್ತಿತ್ವದಲ್ಲಿರುವ ಕೈಪಿಡಿ | ಮರು ಹೆಸರಿಸಲಾಗಿದೆ, |
|---|---|---|
| 11. | ಕರ್ನಾಟಕ ವಿದ್ಯುಚ್ಛಕ್ತಿ ಮಂಡಳ ಲೆಕ್ಕಗಳ ಕೈಪಿಡಿ ಸಂಪುಟ -3 (ಕಮರ್ಷಿಯಲ್ ಅಕೌಂಟಿಂಗ್) | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಲೆಕ್ಕಗಳ ಕೈಪಿಡಿ ಸಂಪುಟ-3 (ಕಮರ್ಷಿಯಲ್ ಅಕೌಂಟಿಂಗ್). |

ಪು.ತಿ.ನೋ.,

**ಸೂಚನೆ:-**

ಕವಿಪ್ರನಿನಿ ನೌಕರರ ಸೇವಾ(ನಡತೆ) ನಿಯಮಗಳು, 2021,ರನ್ನು ಕ್ರಮ ಸಂಖ್ಯೆ- 10 ರಲ್ಲಿ ಸೇರಿಸಿರುತ್ತದೆ. ಆದೇಶ ಸಂಖ್ಯೆ:ಕವಿಪ್ರನಿನಿ/ಬಿ84/24333/2021-22, ದಿನಾಂಕ:22.06.2021ರ ಆದೇಶದ ಉಳಿದ ಅಂಶಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**'ಆದೇಶದ ಮೇರೆಗೆ'**

ನಿರ್ದೇಶಕರು(ಆಡಳಿತ ಮತ್ತು ಮಾ.ಸಂ),
ಕವಿಪ್ರನಿನಿ.

**ಪ್ರತಿಯನ್ನು ಮಾಹಿತಿಗಾಗಿ:-**

1. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಬೆವಿಸಕಂ/ಗುವಿಸಕಂ/ ಮವಿಸಕಂ / ಹುವಿಸಕಂ /ಮೆಸ್ಕಾಂ/ಪಿ.ಸಿ.ಕೆ.ಎಲ್.

**ಪ್ರತಿಗಳು:-**

1. ನಿರ್ದೇಶಕರು(ಪ್ರಸರಣ), ಕವಿಪ್ರನಿನಿ ಹಾಗೂ ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ ಹಾಗೂ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು.
3. ಎಲ್ಲಾ ಮುಖ್ಯ ಇಂಜಿನಿಯರ್(ವಿದ್ಯುತ್), ಕವಿಪ್ರನಿನಿ ಹಾಗೂ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು.
4. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಹಣಕಾಸು)/ ನಿರ್ದೇಶಕರು(ಪ್ರಸರಣ)/ ನಿರ್ದೇಶಕರು(ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು:-**

1. ಅಧೀಕ್ಷಕ ಇಂಜಿನಿಯರ್(ವಿದ್ಯುತ್), ಮಾಹಿತಿ ತಂತ್ರಜ್ಞಾನ, ಕವಿಪ್ರನಿನಿ.
2. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿದ್ಯುತ್), / ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು/ಪಿ.ಸಿ.ಕೆ.ಎಲ್.
3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ ಹಾಗೂ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು.
4. ಎಲ್ಲಾ ಮುಖ್ಯ ಇಂಜಿನಿಯರ(ವಿದ್ಯುತ್),/ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು/ಪಿ.ಸಿ.ಕೆ.ಎಲ್.
5. ಕವಿಪ್ರನಿನಿಯ ನಿಗಮದ ಎಲ್ಲಾ ಅಧಿಕಾರಿಗಳಿಗೆ.

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು ಕವಿಪ್ರನಿನಿ ನೌಕರರ ಸಂಘ (ನೋಂದಣಿ ಸಂಖ್ಯೆ:659), ಬೆಂಗಳೂರು ಮತ್ತು ನಿರ್ದೇಶಕರು ಕವಿಪ್ರನಿನಿ ಹಾಗೂ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು.
2. ಶ್ರೀ.ಟಿ.ಶಿವಪ್ರಕಾಶ್, ಅಧ್ಯಕ್ಷರು ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು ಮತ್ತು ನಿರ್ದೇಶಕರು ಕವಿಪ್ರನಿನಿ ಹಾಗೂ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಪಿಂಚಣಿದಾರರ ಸಂಘ, ಕಾವೇರಿ ಭವನ ಬೆಂಗಳೂರು.